# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 329
ಸದಸ್ಯರ ಹೆಸರು : ಶ್ರೀ ಎಂ.ಪಿ. ಸುಜಾ ಕುಶಾಲಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ನೀಡುವ ಸಂಬಂಧ ಆದೇಶ ಹೊರಡಿಸಲಾಗಿದೆಯೇ; (ಆದೇಶದ ಪ್ರತಿಯನ್ನು ಒದಗಿಸುವುದು) | ರಾಜ್ಯದಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ನೀಡುವ ಸಂಬಂಧ ಆದೇಶ ಹೊರಡಿಸಲಾಗಿದೆ.<br><br>ಅಧಿಸೂಚನೆಯ ಪ್ರತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ದಿನಾಂಕ:01.01.2025ರ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆ ನೀಡುವ ಬಗ್ಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದ್ದು, ಸದರಿ ಅರ್ಜಿಯಲ್ಲಿ ಅರ್ಜಿದಾರನ ಮತ್ತು ಕುಟುಂಬ ಸದಸ್ಯರ ಹಿಂದಿನ 05 ವರ್ಷಗಳ ಆದಾಯ ತೆರಿಗೆಯ ವಿವರಗಳನ್ನು ಕೇಳಲಾಗಿದೆಯೇ? (ಸಂಪೂರ್ಣ ವಿವರವನ್ನು ಒದಗಿಸುವುದು) | ದಿನಾಂಕ:01.01.2005ರ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆ ನೀಡುವ ಬಗ್ಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದ್ದು, ಸದರಿ ಅರ್ಜಿಯಲ್ಲಿ ಅರ್ಜಿದಾರನ ಮತ್ತು ಕುಟುಂಬ ಸದಸ್ಯರ ಹಿಂದಿನ 05 ವರ್ಷಗಳ ಆದಾಯ ತೆರಿಗೆಯ ವಿವರಗಳನ್ನು ಕೇಳಲಾಗಿದೆ (ಸುತ್ತೋಲೆಯ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಆರ್‌ಡಿ 111 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ -1

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ | ಬೆಂಗಳೂರು, ಗುರುವಾರ, ೧೯, ಜನವರಿ, ೨೦೨೩(ಪುಷ್ಯ, ೨೯, ಶಕವರ್ಷ, ೧೯೪೪) | ನಂ. ೩೦ |
|---|---|---|
| Part – IV A | BENGALURU, THURSDAY, 19, JANUARY, 2023(PUSHYA, 29, SHAKAVARSHA, 1944) | No. 30 |

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 33 SHASANA 2022, BENGALURU, DATED: 19.01.2023**

The Karnataka Land Revenue (Third Amendment) Bill, 2022 ಇದಕ್ಕೆ 2023 ರ ಜನವರಿ ತಿಂಗಳ 18ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2023 ರ ಕರ್ನಾಟಕ ಅಧಿನಿಯಮ ಸಂಖ್ಯೆ: 09 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 09 OF 2023**

(First Published in the Karnataka Gazette Extra-ordinary on the 19th Day of January, 2023)

**THE KARNATAKA LAND REVENUE (THIRD AMENDMENT) ACT, 2022**

(Received the assent of the Governor on the 18th day of January, 2023)

An Act further to amend the Karnataka Land Revenue Act, 1964.

Whereas, it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Seventy third year of the Republic of India, as follows:-

**1. Short title and commencement.-** (1) This Act may be called the Karnataka Land Revenue (Third Amendment) Act, 2022.

(2) It shall come into force at once.

**2. Insertion of new section 94E.-** In the Karnataka Land Revenue Act, 1964 (Karnataka Act 12 of 1964) after section 94D, the following shall be inserted, namely:-

"**94-E. Lease of Plantation lands.-** Notwithstanding anything contained in sections 69 and 94, a family cultivating plantation crops being in unauthorized occupation of Government lands prior to the first day of January, 2005 and continues to be in possession of such land on the date of commencement of the Karnataka Land Revenue (Third Amendment) Act, 2022, such land shall be leased to that family upto an extent of twenty five acres for a period not exceeding thirty years by the concerned Deputy Commissioner subject to such terms and conditions, in such manner and payment of such rates as may be prescribed.

Provided that, after such land is given on lease, the cases pending relating to unauthorized cultivation on such lands shall stand abated forthwith.

**Explanation:** For the purpose of this section "Family" means and includes the husband, wife, unmarried daughters and minor sons as the case may be."

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 33 ಶಾಸನ 2022, ಬೆಂಗಳೂರು, ದಿನಾಂಕ: 19.01.2023.**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Land Revenue (Third Amendment) Act, 2022 (Karnataka Act No. 09 of 2023) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2023 ರ ಕರ್ನಾಟಕ ಅಧಿನಿಯಮ ಸಂಖ್ಯೆ: 09**

(2023 ರ ಜನವರಿ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2022**

(2023 ರ ಜನವರಿ ತಿಂಗಳ 18ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94-ಇ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94-ಡಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

**"94-ಇ. ಪ್ಲಾಂಟೇಶನ್ ಭೂಮಿಗಳ ಗುತ್ತಿಗೆ.-** 69 ಮತ್ತು 94ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, 2005ರ ಜನವರಿ ಮೊದಲನೇ ದಿನಕ್ಕೆ ಮುಂಚೆ ಸರ್ಕಾರಿ ಭೂಮಿಗಳ ಅನಧಿಕೃತ ಅಧಿಭೋಗದಲ್ಲಿದ್ದು ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವ ಯಾವುದೇ ಕುಟುಂಬವು,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2022ರ ಪ್ರಾರಂಭದ ದಿನಾಂಕದಂದು ಅಂಥ ಭೂಮಿಯ ಸ್ವಾಧೀನದಲ್ಲಿ ಮುಂದುವರೆದಿದ್ದರೆ, ಅಂಥ ಭೂಮಿಯನ್ನು ನಿಯಮಿಸಬಹುದಾದಂಥ ನಿಬಂಧನೆಗಳನ್ನು ಮತ್ತು ಷರತ್ತುಗಳಿಗೆ ಒಳಪಟ್ಟು, ಅಂಥ ರೀತಿಯಲ್ಲಿ ಮತ್ತು ಅಂಥ ದರಗಳನ್ನು ಪಾವತಿಯ ಮೇಲೆ ಸಂಬಂಧಪಟ್ಟ ಜಿಲ್ಲಾಧಿಕಾರಿಯು ಮೂವತ್ತು ವರ್ಷಗಳಿಗೆ ಮೀರದಿರುವ ಅವಧಿಗೆ ಇಪ್ಪತ್ತೈದು ಎಕರೆಗಳ ವಿಸ್ತೀರ್ಣಗಳವರೆಗಿನ ಭೂಮಿಯನ್ನು ಆ ಕುಟುಂಬಕ್ಕೆ ಗುತ್ತಿಗೆ ನೀಡತಕ್ಕದ್ದು:

ಪರಂತು ಅಂಥ ಭೂಮಿಯನ್ನು ಗುತ್ತಿಗೆಯ ಮೇಲೆ ನೀಡಿದ ತರುವಾಯ, ಅಂಥ ಭೂಮಿಗಳ ಮೇಲಿನ ಅನಧಿಕೃತ ಸಾಗುವಳಿಗೆ ಸಂಬಂಧಿಸಿದಂತೆ ಬಾಕಿಯಿರುವ ಪ್ರಕರಣಗಳನ್ನು ತಕ್ಷಣ ಕೊನೆಗೊಳ್ಳತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ "ಕುಟುಂಬ" ಎಂದರೆ ಪತಿ, ಪತ್ನಿ, ಅವಿವಾಹಿತ ಹೆಣ್ಣು ಮಕ್ಕಳು ಮತ್ತು ಸಂದರ್ಭಾನುಸಾರವಾಗಿ ಅಪ್ರಾಪ್ತ ಗಂಡು ಮಕ್ಕಳನ್ನು ಒಳಗೊಳ್ಳುತ್ತದೆ".

The above translation of the Karnataka Land Revenue (Third Amendment) Act, 2022 (Karnataka Act No. 09 of 2023) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE

ಅನುಬಂಧ-2

## ಕರ್ನಾಟಕ ಸರ್ಕಾರ

**ಸಂಖ್ಯೆ:** ಆರ್‌ಡಿ 07 ಎಲ್‌ಜಿಪಿ 2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 25.10.2024

**ಸುತ್ತೋಲೆ**

**ವಿಷಯ** : ಪ್ಲಾಂಟೇಶನ್ ಬೆಳೆಗಳ ಜಮೀನುಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ.

* * *

ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 07 ಎಲ್.ಜಿ.ಪಿ. 2023, ದಿನಾಂಕ: 12.03.2024ರಲ್ಲಿ ಸರ್ಕಾರಿ ಜಮೀನಿನಲ್ಲಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆಗೆ ನೀಡಲು ಸಂಬಂಧಪಟ್ಟ ಬೆಳೆಗಾರರಿಂದ ದಿನಾಂಕ: 12.03.2024 ರಿಂದ ಜಾರಿಗೆ ಬರುವಂತೆ ಮೂರು ತಿಂಗಳೊಳಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸಲು ನಿರ್ದೇಶನ ನೀಡಲಾಗಿರುತ್ತದೆ.

ಪ್ರಸ್ತುತ, ಸರ್ಕಾರಿ ಜಮೀನಿನಲ್ಲಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ ದಿನಾಂಕ: 12.03.2024 ರಿಂದ ಜಾರಿಗೆ ಬರುವಂತೆ ಮೂರು ತಿಂಗಳೊಳಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿರುವ ಅವಧಿಯು ಮುಕ್ತಾಯಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 01.01.2005ರ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ ಇದರೊಂದಿಗೆ ಲಗತ್ತಿಸಿರುವ ನಮೂನೆ-9 ರಲ್ಲಿ ಸಂಬಂಧಪಟ್ಟ ಬೆಳೆಗಾರರಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ದಿನಾಂಕ: 31.12.2024ರವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ. ಸದರಿ ಅವಧಿಯಲ್ಲಿ ಅರ್ಜಿಗಳನ್ನು ತಹಶೀಲ್ದಾರರು ಸ್ವೀಕರಿಸತಕ್ಕದ್ದು.

ಆದ್ದರಿಂದ, ಜಿಲ್ಲಾಧಿಕಾರಿಗಳು / ತಹಶೀಲ್ದಾರವರು ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತವಾಗಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ ಪ್ಲಾಂಟೇಶನ್ ಬೆಳೆಗಾರರಿಗೆ ವ್ಯಾಪಕ ಪ್ರಚಾರ ಮಾಡಿ ಅರ್ಜಿ ಸಲ್ಲಿಸಲು ಜಾಗೃತಿ ಮೂಡಿಸುವುದು.

ಪ್ಲಾಂಟೇಶನ್ ಭೂಮಿ ಗುತ್ತಿಗೆ ನೀಡುವ ಕುರಿತು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು ತಂತ್ರಾಂಶವನ್ನು ರಾಜ್ಯಾದ್ಯಂತ ಅಳವಡಿಸಲು ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ ಇವರು ಕೂಡಲೇ ಕ್ರಮವಹಿಸತಕ್ಕದ್ದು.

---2

ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಇವರು ಸರ್ಕಾರಿ ಜಮೀನುಗಳಲ್ಲಿ ಬೆಳೆಯುತ್ತಿರುವ ಪ್ಲಾಂಟೇಶನ್ ಬೆಳೆಗಳ ಎಲ್ಲಾ ಜಮೀನುಗಳ ಕುರಿತು ಸರ್ವೆ ನಡೆಸಿ ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

25/10/2024

**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂ ಮಂಜೂರಾತಿ-1).

**ಇವರಿಗೆ,**

1. ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರು.
3. ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು-560 001.
4. ನಿರ್ದೇಶಕರು, ಭೂಮಿ, ಯುಪಿಓಆರ್ ಮತ್ತು ಮೇಲ್ವಿಚಾರಣಾ ಕೋಶ, ಕೆ.ಆರ್.ಸರ್ಕಲ್, ಬೆಂಗಳೂರು.
5. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560 001.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಉಪವಿಭಾಗಾಧಿಕಾರಿಗಳು (ಜಿಲ್ಲಾಧಿಕಾರಿಗಳ ಮುಖಾಂತರ).
8. ಎಲ್ಲಾ ಉಪನೋಂದಣಾಧಿಕಾರಿಗಳು (ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಮುಖಾಂತರ).
9. ಎಲ್ಲಾ ತಹಶೀಲ್ದಾರರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
10. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಸುಧಾರಣೆ)
4. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು ಕಂದಾಯ ಇಲಾಖೆ (ಸಮನ್ವಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಎಲ್ಲಾ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಪೀಠಾಧಿಕಾರಿಗಳು, ಭೂ ಮಂಜೂರಾತಿ-2, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

* * * *

# ನಮೂನೆ-9

ಇವರಿಗೆ,

ತಹಶೀಲ್ದಾರ್,

__________________ ತಾಲ್ಲೂಕು,

__________________ ಜಿಲ್ಲೆ.

ನಾನು, ರಾಜ್ಯ ಸರ್ಕಾರಕ್ಕೆ ಸೇರಿದ ಜಮೀನುಗಳಲ್ಲಿ ಅನಧಿಕೃತವಾಗಿ ಪ್ಲಾಂಟೇಶನ್ ಬೆಳೆಗಳಾದ ಏಲಕ್ಕಿ, ಕಾಫಿ, ಮೆಣಸು, ರಬ್ಬರ್ ಅಥವಾ ಟೀ/ಚಹಾ ಬೆಳೆಗಳನ್ನು ಬೆಳೆಯುತ್ತಿದ್ದು, ಸದರಿ ಬೆಳೆಗಳ ಮಾಹಿತಿಯನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ. ಸದರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94E ರನ್ವಯ ನನಗೆ ಗುತ್ತಿಗೆಗೆ ನೀಡುವಂತೆ ಕೋರುತ್ತೇನೆ.

| | | |
|---|---|---|
| 1. | ಅರ್ಜಿದಾರನ ಹೆಸರು | |
| 2. | ವಿಳಾಸ | |
| 3. | ಉದ್ಯೋಗ | |
| 4. | ವಯಸ್ಸು | |
| 5. | ವಾಸದ ಸ್ಥಳ | |
| 6. | ತಂದೆ / ಗಂಡನ ಹೆಸರು | |
| 7. | ಆಧಾರ್ ಸಂಖ್ಯೆ / PAN ಸಂಖ್ಯೆ, ಹಿಂದಿನ ಐದು ವರ್ಷಗಳ ಆದಾಯ ತೆರಿಗೆಯ ವಿವರಗಳು | |
| 8. | ಕುಟುಂಬ ಸದಸ್ಯರು ಗಳ ವಿವರ, ಹಿಂದಿನ ಐದು ವರ್ಷಗಳ ಆದಾಯ ತೆರಿಗೆಯ ವಿವರಗಳು | |
| 9. | ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನಿನ ವಿವರ | a) ಗ್ರಾಮ |
| | | b) ತಾಲ್ಲೂಕು |
| | | c) ಸರ್ವೆ ನಂ. |
| | | d) ವಿಸ್ತೀರ್ಣ : __________ ಎಕರೆ<br>__________ ಗುಂಟೆ<br>ಒಟ್ಟು ಮರಗಳು (ಜಾತಿವಾರು)____ |
| | | e) ಸರಹದ್ದು :<br>1) ಉತ್ತರ<br>2) ದಕ್ಷಿಣ<br>3) ಪೂರ್ವ<br>4) ಪಶ್ಚಿಮ |
| | | f) ನಕ್ಷೆ ಲಗತ್ತಿಸಿದೆ : ಹೌದು / ಇಲ್ಲ |
| 10. | ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ದಿನಾಂಕ ಹಾಗೂ ಟಿ.ಟಿ. ಜುಲ್ಮಾನೆ ಪಾವತಿಸಿರುವ ವಿವರ, ಯಾವುದಾದರು ಇದ್ದರೆ, | |
| 11. | ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಉದ್ದೇಶ | |

| | | |
|---|---|---|
| 12 | ಅರ್ಜಿದಾರರ ಕುಟುಂಬದ ಇತರೆ ಸದಸ್ಯರುಗಳು ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಪ್ಲಾಂಟೇಷನ್ ಬೆಳೆಗಳ ಸಾಗುವಳಿ ಮಾಡುತ್ತಿದ್ದರೆ ಅವರುಗಳ ವಿವರ. | ಹೆಸರು ಮತ್ತು ವಿಳಾಸ<br>ಅರ್ಜಿದಾರರೊಂದಿಗೆ ಇರುವ ಸಂಬಂಧ<br>a) ಗ್ರಾಮ<br>b) ತಾಲ್ಲೂಕು<br>c) ಸರ್ವೆ ನಂ.<br>d) ವಿಸ್ತೀರ್ಣ : ________ ಎಕರೆ ___________ ಗುಂಟೆ,<br>ಒಟ್ಟು ಮರಗಳು (ಪ್ರಜಾತಿವಾರು)___<br>e) ಸರಹದ್ದು :<br>1) ಉತ್ತರ<br>2) ದಕ್ಷಿಣ<br>3) ಪೂರ್ವ<br>4) ಪಶ್ಚಿಮ |
| 13. | ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ದಿನಾಂಕ ಹಾಗೂ ಟಿ.ಟಿ. ಜುಲ್ಮಾನೆ ಪಾವತಿಸಿರುವ ವಿವರ, ಯಾವುದಾದರು ಇದ್ದರೆ. | |
| 14. | ಅರ್ಜಿದಾರರು ಹಾಗೂ ಅವನ ಕುಟುಂಬ ಸದಸ್ಯರು ಹೊಂದಿರುವ ಜಮೀನಿನ ವಿವರ. | a. ಗ್ರಾಮ<br>b. ತಾಲ್ಲೂಕು<br>c. ಸರ್ವೆ ನಂ.<br>d. ವಿಸ್ತೀರ್ಣ : ________ ಎಕರೆ<br>e. ___________ ಗುಂಟೆ.<br>ಒಟ್ಟು ಮರಗಳು (ಪ್ರಜಾತಿವಾರು)___<br>f. ಸರಹದ್ದು:<br>1) ಉತ್ತರ<br>2) ದಕ್ಷಿಣ<br>3) ಪೂರ್ವ<br>4) ಪಶ್ಚಿಮ |

ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ಹಾಗೂ ನಿಬಂಧನೆಗಳನ್ವಯ ಮೇಲಿನ ಭೂಮಿಯನ್ನು ಗುತ್ತಿಗೆ ನೀಡುವಾಗ ವಿಧಿಸಬಹುದಾದ ಎಲ್ಲಾ ಷರತ್ತುಗಳಿಗೆ ನಾನು ಬದ್ಧನಾಗಿರುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ

## ಸ್ವೀಕೃತಿ

ನೋಂದಣಿ ಸಂಖ್ಯೆ: ದಿನಾಂಕ:

ಶ್ರೀ/ಶ್ರೀಮತಿ ______________________________ ಇವರಿಂದ ______________ ಗ್ರಾಮದ ___________ತಾಲ್ಲೂಕಿನ ____________ ಸರ್ವೆ ನಂ. __________ ನಲ್ಲಿರುವ ಅನಧಿಕೃತವಾಗಿ ಬೆಳೆಯುತ್ತಿರುವ ಪ್ಲಾಂಟೇಷನ್ ಬೆಳೆಗಳ ಜಮೀನನ್ನು ಗುತ್ತಿಗೆಗೆ ಪಡೆಯಲು ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಲಾಗಿದೆ.

ಮುದ್ರೆಯೊಂದಿಗೆ ಕಛೇರಿಯಲ್ಲಿ
ಸಹಾಯಕ ಪಡೆದುಕೊಳ್ಳುವುದು.